# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಘಟಕ ವೆಚ್ಚವನ್ನು ಹೆಚ್ಚಿಸುವ ಬಗ್ಗೆ ಆದೇಶ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಸಕಇ 170 ಎಸಡಿಸಿ 01, ದಿನಾಂಕ: 22-03-02

2) ದಿನಾಂಕ:31-05-06ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭಾ ನಡವಳಿಗಳು

3) ಸರ್ಕಾರಿ ಆದೇಶ ಸಂಖ್ಯೆ:ಸಕಇ 152 ಎಸಡಿಸಿ 02, ದಿನಾಂಕ: 06-06-06

ಪ್ರಸ್ತಾವನೆ:

ಮೇಲೆ ಓದಲಾದ (3)ರ ದಿನಾಂಕ:06-06-06ರ ಸರ್ಕಾರಿ ಆದೇಶದಲ್ಲಿ ಡಾ:ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮಕ್ಕೆ ಅನ್ವಯವಾಗುವಂತೆ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಘಟಕ ವೆಚ್ಚವನ್ನು ಪರಿಷ್ಕರಿಸಿ ಗರಿಷ್ಟ ರೂ.75,000-00ರಿಂದ ರೂ.1.00 ಲಕ್ಷಕ್ಕೆ ಸಾಲ ಇರುವ ಧನ ಸಹಾಯದ ಮಾದರಿಯಲ್ಲಿಯೇ ನೂತನ ಫಲಾನುಭವಿಗಳು 2006-07ನೇ ಆರ್ಥಿಕ ಸಾಲಿನಿಂದ ಜಾರಿಗೆ ಬರುವಂತೆ ಮಂಜೂರಾತಿ ನೀಡಿ ಹೆಚ್ಚಿಸಲಾಗಿದೆ. ಇದರಿಂದಾಗಿ ಈಗ ಪ್ರತಿ ಕೊಳವೆ ಬಾವಿಗೆ ರೂ.86,000-00ಗಳ ಸಹಾಯಧನ ಹಾಗೂ ರೂ.14,000-00ಗಳು ಸಾಲದ ರೂಪವಾಗಿರುತ್ತದೆ. ಇದಲ್ಲದೆ ವಿದ್ಯುಚ್ಛಕ್ತಿ ಸರಬರಾಜು ನಿಗಮಕ್ಕೆ ಕಟ್ಟಬೇಕಾದ ಠೇವಣಿ ಮೊತ್ತವನ್ನು ಈ ಸಹಾಯಧನದ ಮಿತಿಯೊಳಗೆಯೇ ಭರಿಸತಕ್ಕದ್ದೆಂದು ಆದೇಶಿಸಲಾಗಿದೆ.

ಮೇಲೆ ಓದಲಾದ (2) ದಿನಾಂಕ:31-05-06ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ:31-05-06ರ ಸಭೆಯ ನಡವಳಿಯಂತೆ ಅಧಿಕಾರಯುಕ್ತ ಸಮಿತಿಯು ಸಮಾಜ ಕಲ್ಯಾಣ ಇಲಾಖೆಯು ಕಾರ್ಯಗತಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ಕೊಳವೆಬಾವಿಯ ಘಟಕವೆಚ್ಚವನ್ನು ರೂ.75,000-00ದಿಂದ ರೂ.1.00 ಲಕ್ಷಕ್ಕೆ ಹೆಚ್ಚಿಸಲು ತೀರ್ಮಾನಿಸಿತು. ಈ ಯೋಜನೆಯನ್ನು (1) ಡಾ:ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ, (2) ಡಿ.ದೇವರಾಜ ಅರಸ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ (3) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳು ಅನುಷ್ಠಾನಗೊಳಿಸುತ್ತಿವೆ. ಡಾ:ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮಕ್ಕೆ ಅನ್ವಯಿಸಿ ಹೊರಡಿಸಿರುವ ಮೇಲೆ ಓದಲಾದ (3) ದಿನಾಂಕ:06-06-06ರ ಆದೇಶವನ್ನು ಭಾಗಶ: ಮಾರ್ಪಡಿಸಿ ಇತರೇ ನಿಗಮಗಳಿಗೂ ಅನ್ವಯಿಸುವಂತೆ ಸದರಿ ಆದೇಶವನ್ನು ಹೊರಡಿಸಬೇಕಾಗಿದೆ. ಅಂತೆಯೇ ಈ ಕೆಳಕಂಡಂತೆ ಆದೇಶ:

## ಸರ್ಕಾರಿ ಆದೇಶ ಸಂಖ್ಯೆ:ಸಕಇ 152 ಎಸಡಿಸಿ 02

ಬೆಂಗಳೂರು, ದಿನಾಂಕ:16-06-06

ಸರ್ಕಾರಿ ಆದೇಶ ಸಂಖ್ಯೆ: ಸಕಇ 152 ಎಸಡಿಸಿ 02, ದಿನಾಂಕ:06-06-06ರ ಸರ್ಕಾರಿ ಆದೇಶದ ಮೊದಲನೆಯ ಕಂಡಿಕೆಯನ್ನು ಭಾಗಶ: ಮಾರ್ಪಡಿಸುತ್ತಾ, ಸದರಿ ಕಂಡಿಕೆಯಲ್ಲಿ ನಮೂದಿಸಲಾಗಿರುವ "ಡಾ:ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ" ಎಂಬ ವಾಕ್ಯವೃಂದದ ನಂತರ

..2.

"ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳು" ಎಂಬ ವಾಕ್ಯವೃಂದವನ್ನು ಹಾಗೂ ಅದೇ ಕಂಡಿಕೆಯ ಕೊನೆಯಲ್ಲಿ ಕಾಣಿಸುವ "ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವೇ" ಎಂಬ ವಾಕ್ಯವೃಂದದ ಬದಲಾಗಿ "ಸಂಬಂಧಪಟ್ಟ ನಿಗಮಗಳೇ" ಎಂಬ ವಾಕ್ಯವೃಂದವನ್ನು ಸೇರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/6/06
(ಎ.ಎಂ. ಚಿದಾನಂದಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ—2,
ಸಮಾಜ ಕಲ್ಯಾಣ ಇಲಾಖೆ.
16/06/06.

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ

ಪ್ರತಿ:

1) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು
2) ಎಲ್ಲಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು:ಕಾರ್ಯದರ್ಶಿಗಳು
3) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
4) ಆಯುಕ್ತರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು
5) ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು
6) ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು
7) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
8) ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು
9) ವ್ಯವಸ್ಥಾಪಕರ ನಿರ್ದೇಶಕರು, ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ
10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು
11) ಎಲ್ಲಾ ಜಿಲ್ಲಾಧಿಕಾರಿಗಳು
12) ಎಲ್ಲಾ ಪಂಚಾಯತ್:ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
13) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
14) ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
15) ಮಾನ್ಯ ಉಪ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
16) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು
17) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ
18) ಆರ್ಥಿಕ ಇಲಾಖೆ (ವೆಚ್ಚ—3):ಯೋಜನಾ ಇಲಾಖೆ (ಟಿಪಿ—2)
19) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ
20) ಸರ್ಕಾರದ ಉಪ ಕಾರ್ಯದರ್ಶಿಗಳು—1, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
21) ಸರ್ಕಾರದ ಅಧೀನ ಕಾರ್ಯದರ್ಶಿಗಳು 1, 2 ಮತ್ತು 3 ಸಮಾಜ ಕಲ್ಯಾಣ ಇಲಾಖೆ
23) ಹೆಚ್ಚುವರಿ ಪ್ರತಿ:ಶಾಖಾ ರಕ್ಷಾ ಕಡತ